ದಿನಾಂಕಃ 11.03.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಪ್ರತಿವಾದಿಯ ಪರ ವಕೀಲರಿಂದಃ

3. 820 ಕ್ಕೆ ದಾವಾ ಸ್ವತ್ತನ್ನು ಮಾರುತ್ತೇವೆ ಎಂದು ಪ್ರತಿವಾದಿ ನಿಂಗಪ್ಪ ನಿರ್ಮಲಾ ಬಸವರಾಜ್ ರವರಿಗೆ ಹೇಳಿದರು. 2017 ರಲ್ಲಿ 1 ಎಕರೆಗೆ 15 ಲಕ್ಷ ಬೆಲೆ ಇತ್ತು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲವೆನ್ನುತ್ತಾರೆ. ನಿರ್ಮಲಾ ಮತ್ತು ನಿಂಗಪ್ಪರವರು ತಹಶೀಲ್ದಾರ್ ಕಚೇರಿಯಲ್ಲಿ ಖರೀದಿ ಕರಾರುಪತ್ರವನ್ನು 2017 ರಲ್ಲಿ ಮಾಡಿಕೊಂಡಿರುತ್ತಾರೆ. ಯಾವ ಅಧಿಕಾರಿಯ ಮುಂದೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಬಸವರಾಜ್ ಶಿರಸಂಗಿರವರ ಮುಂದೆ ಎನ್ನುತ್ತಾರೆ. ವಾದಿ 820 ಕ್ಕೆ ಖರೀದಿ ಕರಾರುಪತ್ರವನ್ನು ಮಾಡಿಕೊಂಡಿರುತ್ತಾರೆ. ಸದರಿ ಹಣವನ್ನು ಒಂದೇ ಬಾರಿ ಕೊಟ್ಟರೋ ಹೇಗೆ ಎಂದರೆ ಸಾಕ್ಷಿ ಒಮ್ಮೆ 4 ಲಕ್ಷ ಮ್ತುತೊಮ್ಮೆ 4 ಲಕ್ಷ ಎನ್ನುತ್ತಾರೆ. ಯಾರ ಸಮಕ್ಷಮ ಆ ರೀತಿ ಕೊಟ್ಟರು ಎಂದರೆ ಸಾಕ್ಷಿ ಮನೆಯಲ್ಲಿ 4 ಲಕ್ಷ, ತಹಶೀಲ್ದಾರ್ ಕಚೇರಿಯಲ್ಲಿ ಬರೆಸುವಾಗ 4 ಲಕ್ಷ ಕೊಟ್ಟರು ಎನ್ನುತ್ತಾರೆ. ಖರೀದಿ ಕರಾರುಪತ್ರವನ್ನು ಬರೆಯುವ ಮೊದಲು 4 ಲಕ್ಷ ಹಣ ನೀಡಿದ್ದರು. 4 ಲಕ್ಷ ಹಣ ನೀಡುವಾಗ ನಿರ್ಮಲಾ ಕರಜಗಿಮಟ್ ಮತ್ತು ಶಿವಪ್ಪ ಕತ್ತಿ ಇದ್ದರು. 4 ಲಕ್ಷ ಹಣವನ್ನು ಡಿಸೆಂಬರ್-2017 ರಲ್ಲಿ ಕೊಟ್ಟಿರುತ್ತಾರೆ, ದಿನ ಗೊತ್ತಿಲ್ಲ. ಖರೀದಿ ಕರಾರು ಆಗುವ ಒಂದು ವಾರದ ಮೊದಲು ಹಣ ಕೊಟ್ಟಿರುತ್ತಾರೆ. ಖರೀದಿ ಮಾಡುವ ಸಮಯದಲ್ಲಿ 4 ಲಕ್ಷ ಹಣವನ್ನು ಯಾರ ಸಮಕ್ಷಮ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ನಾನು, ಶಿವಪ್ಪ, ರಾಮಯ್ಯ ವಿಭೂತಿ, ನಿರ್ಮಲಾ ಕರಜಗಿಮಟ್ ಎನ್ನುತ್ತಾರೆ. ಸದರಿ 4 ಲಕ್ಷ ಹಣ ಎಷ್ಟು ಮುಖ ಬೆಲೆಯದ್ದಾಗಿತ್ತು ಎಂದರೆ ಸಾಕ್ಷಿ ನಾನು ನೋಡಿಲ್ಲ ಎನ್ನುತ್ತಾರೆ. ಸದರಿ ಹಣವನ್ನು ಎಲ್ಲಿಂದ ತಂದು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

4. ಖರೀದಿ ಕರಾರುಪತ್ರದಲ್ಲಿ 3 ವರ್ಷ ಅವಧಿ ಬರೆಸಿರುತ್ತಾರೆ. ಈ ರೀತಿ ಬರೆಯಲು ಕಾರಣ ಏನು ಎಂದು ಹೇಳಿದ್ದರು ಎಂದರೆ ಸಾಕ್ಷಿ ಏನೂ ಹೇಳಲಿಲ್ಲ ಎನ್ನುತ್ತಾರೆ. ಖರೀದಿ ಕರಾರುಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನಿಮಗೆ ಮಾಹಿತಿ ಇಲ್ಲವೆಂದರೆ ಸಾಕ್ಷಿ ಇಲ್ಲವೆನ್ನುತ್ತಾರೆ. 2017 ರಲ್ಲಿ ಜಮಿನನ್ನು ಬರೆದುಕೊಡಿ ಎಂದು

ನಿರ್ಮಲಾರವರು ನಿಂಗಪ್ಪರವರನ್ನು ಕೇಳಿದ್ದಾರೆ. ನಿಂಗಪ್ಪರವರು ನಿರ್ಮಲಾರವರನ್ನು 4 ಲಕ್ಷ ಹಣ ಕೇಳಿದ್ದರು, ಅದರ ಭದ್ರತೆಗಾಗಿ ಈ ಖರೀದಿ ಕರಾರುಪತ್ರವನ್ನು ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಇದೇ ರೀತಿ ನಿರ್ಮಲಾರವರು ನಮ್ಮ ಊರಿನ ಸುಮಾರು ಜನರ ಬಳಿ ಖರೀದಿ ಕರಾರುಪತ್ರ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಿಂಗಪ್ಪರವರು 4 ಲಕ್ಷ ಹಣಕ್ಕೆ ಬಡ್ಡಿ ಸೇರಿಸಿ ಹಿರಿಯರ ಸಮಕ್ಷಮ ನಿರ್ಮಲಾರವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಂಗಪ್ಪರವರು 4 ಲಕ್ಷ ಹಣವನ್ನು ನಿರ್ಮಲಾರವರಿಗೆ ಕೊಟ್ಟಿದ್ದರೂ ಸಹ ನಿರ್ಮಲಾರವರು ಖರೀದಿ ಕರಾರುಪತ್ರವನ್ನು ರದ್ದು ಮಾಡಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಮಾಡಿಕೊಂಡಿರುವುದಿಲ್ಲ ಎನ್ನುತ್ತಾರೆ. ನಿಂಗಪ್ಪರವರು ನಿರ್ಮಲಾರವರಿಗೆ ಕೊಡಬೇಕಾದ ಹಣ ಕೊಟ್ಟಿದ್ದರೂ ಸಹ ಕೊಟ್ಟಿಲ್ಲ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನಿರ್ಮಲಾರವರು ದೂರಿನ ಸಂಭಂದಿಯಾಗಿರುತ್ತಾರೆ. ಅವರು ನನ್ನ ಸಂಭಂದಿಯಾಗಿರುವ ಕಾರಣ ನಾನು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯಪ್ರಮಾಣಪತ್ರ ಸಲ್ಲಿಸಿ, ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ